ಗೋಶಾಲೆಯ ಉಸ್ತುವಾರಿ, ಫಸಲು ಕೊಡುತ್ತಿದ್ದ 10–15 ಎಕರೆಯಷ್ಟಾಗುವ ಅಡಿಕೆ ತೋಟದ ಕೆಲಸ ಕಾಮಗಾರಿಗಳ ಮೇಲಿನ ನಿಗಾ, ಒಂದಾದ ಮೇಲೊಂದರಂತೆ ಬರುತ್ತಿದ್ದ ದೀಪೋತ್ಸವ, ಜಯಂತ್ಯುತ್ಸವ, ರಾಮನವಮಿಯಂತಹ ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ಅದಕ್ಕೆ ಆಮಂತ್ರಣ, ಊಟೋಪಚಾರದ ವ್ಯವಸ್ಥೆ... ಹೀಗೆ ಶ್ರದ್ಧೆ, ಭಕ್ತಿ ಮತ್ತು ಶುದ್ಧ ಹಸ್ತದಿಂದ ಮೈ ಬಗ್ಗಿಸಿ ಸೇವೆ ಮಾಡುವವರಿಗೆ ಮಠದಲ್ಲಿ ವರ್ಷವೂ ಕೆಲಸವಿದ್ದೇ ಇರುತ್ತದೆ. ಇವನಾದರೋ ನಿರ್ವಂಚನೆಯಿಂದ ಅದನ್ನೆಲ್ಲಾ ಮಾಡಿಕೊಂಡೇ ಬಂದಿದ್ದ. ಆದರೆ ಶ್ರೀಮಠದ ಇತಿಹಾಸವನ್ನು ಬಲ್ಲವರೆಲ್ಲರಿಗೂ ತಿಳಿದ ಸಂಗತಿಯೆಂದರೆ, ಎಷ್ಟೇ ಭಕ್ತಿನಿಷ್ಠೆಯಿಂದ ಶ್ರೀರಾಮನ ಸೇವೆ ಮಾಡಿದರೂ ಬರೀ ಒಂದೆರಡು ವರ್ಷದಲ್ಲಿಯೇ ದೇವರಿಗೆ ತನ್ನ ಬಂಟನ ಮೇಲೆ ಮನಸ್ಸು ಮುರಿದು, ಇನ್ನೇನು ಮೂರನೇ ವರ್ಷಕ್ಕೆ ಸೇವೆಗೆ ಸಿದ್ಧನಾಗಿದ್ದಾನೆ ಅನ್ನುವಷ್ಟರಲ್ಲಿ ಅವನನ್ನು ದೂರ ಕಳಿಸಿಯೇ ಬಿಡುತ್ತಾನೆ! ರಾಜಾರಾಮನಿಗೆ ಆಗಿದ್ದೂ ಅದೇ.

ಇತ್ತೀಚೆಗೆ ಒಂದು ದಿನ, ನವಿಲೆಸರಕ್ಕೆ ಹೊಂದಿಕೊಂಡಿದ್ದ ಹಸಿರೂರಿನ ಒಂದಿಷ್ಟು ಜನ ಬಂದು, 'ಊರ್ನಲ್ಲಿ ಅಮ್ಮನೋರ ದೇವಸ್ಥಾನಜಾತ್ರೆ ಮಾಡ್ತಿದೀವಿ; ಮಠದಿಂದ 5 ಲಕ್ಷ ಕೊಡ್ಸಿ' ಎಂದು ರಾಜಾರಾಮನನ್ನು ದುಂಬಾಲು ಬಿದ್ದರು.

"ನೋಡಿ, ಜಾತ್ರೆ ಮೂರು ದಿನ ತಾನೆ? ಒಂದು ದಿನ ಅನ್ನಸಂತರ್ಪಣೆ ಮಾಡಿ; ಅದರ ಎಲ್ಲಾ ಖರ್ಚನ್ನೂ ಶ್ರೀಮಠ ಕೊಡೋ ಹಾಗೆ ಸ್ವಾಮೀಜಿಗೆ ಹೇಳ್ತಿನಿ."

ದೇವಸ್ಥಾನದ ಸಮಿತಿಯ ಕಾರ್ಯದರ್ಶಿ, ಏರು ದನಿಯಲ್ಲಿಯೇ ಶುರುಮಾಡಿದ:

"ನಾವೇನೂ ನಿಮ್ಮ ಮಠದ ತರ ಬ್ರಾಹ್ಮಣ ಸಂತರ್ಪಣೆ ಮಾಡ್ತಾಯಿಲ್ಲ; 'ಸ್ಪೆಷಲ್ ಊಟ'ಕ್ಕೆ ತುಂಬಾ ದುಡ್ಡು ಬೇಕು ಕೊಡ್ಸಿ."

ರಾಜಾರಾಮನಿಗೆ ಸಿಟ್ಟು ಬಂದರೂ ತಡೆದುಕೊಂಡು ಹೇಳಿದ:

"ನೋಡಿ, ನಿಮಗೆ ಗೊತ್ತೇಯಿದೆ, ಇದು ಬ್ರಾಹ್ಮಣ ಭಕ್ತರ ಹಣದಲ್ಲೇ ನಡೀತಿರೋ ಮಠ; ಅವರು ಭಕ್ತಿಯಿಂದ ಕೊಟ್ಟಿರೋ ಹಣವನ್ನ ಕುರಿ–ಕೋಳಿ–ಹೆಂಡಕ್ಕೆ ಅಂತೆಲ್ಲಾ ಕೊಡೋಕ್ಕೆ ಆಗೋಲ್ಲ, ಕೊಡೋಲ್ಲ."

ರಾಜಾರಾಮನ ಈ ಮಾತನ್ನು ಸ್ವಾಮಿಗಳ ಮಾತು ಎಂದು ಪತ್ರಿಕೆಗಳು ತಿರುಚಿ ಬರೆದವು. ಸ್ವಾಮಿಗಳು ಇದರಿಂದ ಬೇಸರಗೊಂಡು, ಎರಡು ಲಕ್ಷ ರೂಪಾಯಿಗಳನ್ನು 'ಪೂಜಾ ವಿಧಿಗಳಿಗೆ' ಎಂದು ಮಠದಿಂದ ಕೊಡಲು ಹೇಳಿದರು. ರಾಜಾರಾಮನು ಹಣವನ್ನು ಅವರಿಗೆ ತಲುಪಿಸಿ, ಹಣಕ್ಕೆ ಸಮಿತಿಯಿಂದ ರಶೀದಿಯನ್ನು ಕೇಳಿದ. ತಕ್ಷಣ ಸಮಿತಿಯ ಕಾರ್ಯದರ್ಶಿ ಹೇಳಿದ:

"ನೀನು ಮಠದಲ್ಲಿ ಅಷ್ಟು ತಿಂತೀಯಲ್ಲಾ, ರಶೀದಿ ಕೊಡ್ತಿಯಾ?"

ಮಾತಿಗೆ ಮಾತು ಬೆಳೆದು ಕೊನೆಗೆ ದೇಣಿಗೆ ಪಡೆದು ಹೋಗುವಾಗ ಅವರು ಒಕ್ಕೊರಲಿಂದ ಹೇಳಿದ್ದು ಇಷ್ಟೆ:

"ನೀನು ಮಠದಲ್ಲಿ ಹ್ಯಂಗಿರ್ತೀಯಾ ನೋಡ್ತೀವಿ; ತಿಂದು ತಿಂದು ಕೊಬ್ಬಿದೀಯ. ನಿನ್ನ ಊರು ಬಿಟ್ಟು ಹ್ಯಂಗೆ ಓಡುಸ್ತಿವಿ, ನೋಡ್ತಾಯಿರು."

ಬೆಂಗಳೂರಿನಲ್ಲಿ ಕೇಂದ್ರ ಕಚೇರಿಯಿದ್ದ ಅಂತರರಾಷ್ಟ್ರೀಯ ಕೃಷಿ ಸಂಸ್ಥೆಯೊಂದರಲ್ಲಿ ದೊಡ್ಡ ಹುದ್ದೆಯಲ್ಲಿದ್ದ ಪ್ರಭಾವೀ ವ್ಯಕ್ತಿಯೊಬ್ಬರು, ಮಠದ ಸ್ವಾಮೀಜಿಯವರಿಗೆ ಅತೀ ಹತ್ತಿರದವರಾಗಿದ್ದರು. ಶ್ರೀಮಠದ ಅಡಿಕೆ ತೋಟಕ್ಕೆ ಹೊಂದಿಕೊಂಡಂತೆ ಖಾಲಿಯಿದ್ದ ಭೂಮಿಯಲ್ಲಿ ವಿವಿಧ ತಳಿಯ ಬಾಳೆ ಗಿಡಗಳನ್ನು ಆಧುನಿಕ ಪದ್ಧತಿಯಲ್ಲಿ ಬೆಳೆಯುವ ಬಹುದೊಡ್ಡ ಯೋಜನೆಯೊಂದನ್ನು ಅವರು ಇಲ್ಲಿ ಶುರುಮಾಡಿದ್ದರು. ಕೆಂಪು ಕಾಯಿಗಳನ್ನು ಬಿಡುವ ಮುಂಡು